"ಯಾವಾಗ ಕ್ರೈಂ ಸೀನ್‌ನಲ್ಲಿ ಸಿಕ್ಕಿದ್ದ ರಕ್ತದ ಡಿಎನ್‌ಎ ನವಮಿಯ ಡಿಎನ್‌ಎ ಜೊತೆಗೆ ಪೂರ್ತಿ ಮ್ಯಾಚ್ ಆಗಲಿಲ್ಲವೋ ಆಗಲೇ ನನಗೆ ಈ ಕೇಸ್‌ನಲ್ಲಿ ಇನ್ನೊಂದು ಆಯಾಮ ಇದೆ ಅಂತ ಅನಿಸಿತು. ನವಮಿಯವರ ಗಾಯ, ಪೊಲೀಸರು ವಾಚ್ ಮಾಡುತ್ತಿದ್ದಾರೆ ಎಂದು ತಿಳಿದೂ ಡಾಕ್ಟರ್ ಬಳಿ ಹೋಗಿದ್ದು, ನೀವು ಬಂದು ನಿಮ್ಮ ಹೇಳಿಕೆ ಬದಲಾಯಿಸಿ, ನವಮಿಯನ್ನು ಸಿಗಿಸಲು ಪ್ರಯತ್ನಿಸಿದ್ದು... ಎಲ್ಲವೂ ನಮ್ಮನ್ನು ಒಂದೇ ದಿಕ್ಕಿನಲ್ಲಿ ಯೋಚಿಸಲು ಪ್ರಚೋದಿಸುತ್ತಿದೆ ಅಂತ ಅನಿಸುತ್ತಿತ್ತು. ನಿಮ್ಮ ಮನೆಗೆ ಬಂದು ಹೋಗುವ ನರ್ಸ್ ಅನ್ನು ವಿಚಾರಿಸಿದಾಗ ವಿಷಯ ಹೊರಬಿತ್ತು. ಅದರೊಂದಿಗೇ ಸತ್ಯ ಕೂಡಾ. ನಿಮ್ಮ ಮಗಳನ್ನು ಉಳಿಸಲು ನೀವು ಮಾಡಿದ ನಾಟಕದ ಉದ್ದೇಶ ಸರಿಯಿದ್ದರೂ ಕಾನೂನಿನ ಪ್ರಕಾರ ಅದು ಇನ್ನೊಂದು ಕ್ರೈಂ..."

ನವಮಿ ಓಡಿಬಂದು ನಾಗೇಶನ ಕಾಲಿಗೆ ಬಿದ್ದು,

"ಸರ್ ಅವಳಿನ್ನೂ ಚಿಕ್ಕ ಮಗು ಸರ್... ಹದಿನಾಲ್ಕು ವರ್ಷ ಅಷ್ಟೇ. ಕೇಸ್, ಕೋರ್ಟ್ ಅಂತೆಲ್ಲ ಆದರೆ ಅವಳ ಮನಸ್ಸಿಗೆ ಇನ್ನಷ್ಟು ಆಘಾತ ಆಗುತ್ತದೆ ಸರ್. ಮಾನವೀಯತೆಯ ದೃಷ್ಟಿಯಿಂದ ನೋಡಿ ಸರ್. ಅವಳ ಇಡೀ ಜೀವನ ಹಾಳಾಗುತ್ತದೆ ಸರ್..."

ಆ ದೃಶ್ಯನೋಡಿ ಅಲ್ಲಿದ್ದವರೆಲ್ಲಾ ಮೂಕರಾದರು. ಎಲ್ಲರ ಕಣ್ಣಲ್ಲಿಯೂ ನೀರು ತುಂಬಿತ್ತು. ಎಲ್ಲರಿಗೂ ಸಂದಿಗ್ಧ ಎದುರಾಗಿತ್ತು.

'ಮಾನವೀಯತೆಯಾ... ಕಾನೂನಾ?'

ನಾಗೇಶ್ ದೀರ್ಘವಾಗಿ ಉಸಿರೆಳೆದುಕೊಳ್ಳುತ್ತಾ...

"ಕೆಲವೊಮ್ಮೆ ಪೊಲೀಸರಿಗೆ ಮಾನವೀಯತೆ ಮತ್ತು ಕರ್ತವ್ಯ ಇವೆರಡರ ಮಧ್ಯೆ ಒಂದನ್ನು ಆಯ್ಕೆ ಮಾಡಿಕೊಳ್ಳುವ ಸಂದಿಗ್ಧ ಪರಿಸ್ಥಿತಿ ಬರುತ್ತದೆ. ಇಂದು ನನಗೆ ಆ ದಿನ. ಇಂಥಾ ಸ್ಥಿತಿಯಲ್ಲಿ ನಿರ್ಧಾರ ಮಾಡುವುದು ಅತ್ಯಂತ ಕಠಿಣ. ಆದರೆ ಕಾನೂನಿನ ರಕ್ಷಕನಾಗಿ ನಾನು ಕಾನೂನಿನ ಪರವೇ ನಿರ್ಧಾರ ಮಾಡಬೇಕಾಗುತ್ತದೆ. ಚೇತನ್‌ಕುಮಾರ್ ಅವರ ಕೊಲೆ ಆಪಾದನೆಯ ಮೇಲೆ ನಿಮ್ಮ ಮಗಳನ್ನೂ, ಸಾಕ್ಷಿ ನಾಶಕ್ಕಾಗಿ ಮತ್ತು ಪೊಲೀಸರನ್ನು ತಪ್ಪುದಾರಿಗೆ ಎಳೆದ ಆಪಾದನೆಯ ಮೇಲೆ ನಿಮ್ಮಿಬ್ಬರನ್ನೂ ಅರೆಸ್ಟ್ ಮಾಡಬೇಕಾಗುತ್ತದೆ. ನಿಮ್ಮ ಲಾಯರ್ ಅನ್ನು ಸಂಪರ್ಕಿಸಿ, ಮುಂದಿನ ಪ್ರೊಸೀಜರ್‌ಗಳಿಗೆ ರೆಡಿ ಆಗಲು ಹೇಳಿ."

ಇಷ್ಟೆಲ್ಲಾ ಹೇಳುವಾಗ ನಾಗೇಶನ ಕಣ್ಣುಗಳಿಂದ ಹೊರಬಿದ್ದ ಎರಡು ಹನಿ ಕಣ್ಣೀರನ್ನು ಯಾರೂ ಗಮನಿಸಲಿಲ್ಲ!

**ವಾಸುದೇವ ಮೂರ್ತಿ ಪಿ.**

ಹುಟ್ಟಿದ ಊರು ಶಿವಮೊಗ್ಗ. ಸಿವಿಲ್ ಎಂಜಿನಿಯರ್ ಆಗಿರುವ ಅವರು ಸಂವಹನ ಕಲೆ ಮತ್ತು ಇತರ ವೃತ್ತಿಪರ ಕೌಶಲ್ಯಗಳಿಗೆ ತರಬೇತಿ ಕೊಡುವ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಮೊದಲಿನಿಂದಲೂ ಪತ್ತೆದಾರಿ ಸಾಹಿತ್ಯದ ಬಗ್ಗೆ ಆಸಕ್ತಿ. ಪತ್ತೆದಾರಿ ಕಾದಂಬರಿಕಾರರಾದ ಎನ್. ನರಸಿಂಹಯ್ಯ, ಟಿ.ಕೆ. ರಾಮರಾವ್ ಅವರ ಕಾದಂಬರಿಗಳಿಂದ ಶುರುವಾದ ಓದುವ ಆಸಕ್ತಿ ಬಳಿಕ ಬರವಣಿಗೆಯತ್ತ ಹೊರಳಿಕೊಂಡಿದೆ. ಅವರ ಪ್ರಕಟಿತ ಪತ್ತೆದಾರಿ ಕತೆಗಳ ಸಂಕಲನ: 'ದಿ ಪರ್ಫೆಕ್ಟ್ ಮರ್ಡರ್'